ನಿಯಮ ೩೫೪ ರ ಮೇರೆಗೆ

ಶ್ರೀ ಎಂ. ಮಲ್ಲೇಶಾರ್ಜುನ ಖರ್ಗೆ.—ನಿಯಮ ೩೫೪ ರಲ್ಲಿ ೫ ಲ್ಯಾಪ್ಸ್ ಆಗಿವೆ. ಅವುಗಳಲ್ಲಿ ಕೆಲವು ಮುಖ್ಯವಾದ ವಿಷಯಗಳು ಇವೆ.

ಅಧ್ಯಕ್ಷರು.—ಅವುಗಳು ಇವೊತ್ತು ಇಲ್ಲವೆಂದರೆ ನಾಳೆ ಹಾಕಿಸುತ್ತೇನೆ

1. ಪೋಲೀಸ್ ಇಲಾಖೆಯಲ್ಲಿ ಕಾನ್‌ಸ್ಟೇಬಲ್ಸ್ ಮತ್ತು ಹೆಡ್‌ಕಾನ್ಸ್‌ಟೇಬಲ್‌ಗಳಿಗೆ ಬಡ್ತಿಗಾಗಿ ಪರೀಕ್ಷೆಗಳನ್ನು ಗೊತ್ತುಪಡಿಸಿರುವುದು.

ಶ್ರೀ ಪ್ರಸಂತ ವಿ. ಸಾಲಿಯಾನ.— ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ಕೆಲವು ಪೊಲೀಸ್ ಕಾನ್‌ಸ್ಟೇಬಲ್ ಮತ್ತು ಹೆಡ್ ಕಾನ್‌ಸ್ಟೇಬಲ್‌ಗಳು ಬಡ್ತಿಗಾಗಿ ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಆದರೆ ಕೆಲವು ಪೊಲೀಸ್ ಹೆಡ್‌ಕಾನ್ಸ್‌ಟೇಬಲ್‌ಗಳ ವಿದ್ಯಾಭ್ಯಾಸ ಮಟ್ಟ ತುಂಬಾ ಕೆಳಗಿದೆ. ಆದಕಾರಣ ಅಪರಾಧ ಇತ್ಯಾದಿಗೆ ಸೇರಿದವರೊಂದಿಗೆ ಸ್ಪರ್ಧಿಸುವ ಸ್ಥಿತಿಯಲ್ಲಿಲ್ಲ. ಇದರಿಂದ ಕೆಲವು ಪೊಲೀಸ್ ಕಾನ್‌ಸ್ಟೇಬಲ್ ಮತ್ತು ಹೆಡ್‌ಕಾನ್ಸ್‌ಟೇಬಲ್‌ಗಳಿಗೆ ತೀರಾ ಅನ್ಯಾಯವಾಗುತ್ತಿದೆ. ೧೯೭೪ ರವರೆಗೆ ಸೇರಿದವರಿಗೆ ಸೀನಿಯಾರಿಟಿ ಲಿಸ್ಟ್‌ನಲ್ಲಿ ಬಡ್ತಿ ಕೊಡಬೇಕೆಂದು ಹೈಕೋರ್ಟ್ ಆದೇಶ ನೀಡಿದ್ದರೂ ಸರಕಾರ ಅದನ್ನು ಪಾಲಿಸುತ್ತಿಲ್ಲ. ಇದರಿಂದ ಕೆಲವು ಪೊಲೀಸ್ ಕಾನ್‌ಸ್ಟೇಬಲ್ ಮತ್ತು ಹೆಡ್‌ಕಾನ್ಸ್‌ಟೇಬಲ್‌ಗಳಿಗೆ ಅನ್ಯಾಯವಾಗುತ್ತಿದೆ. ಇದನ್ನು ಸರಿಪಡಿಸಬೇಕು. ದಕ್ಷಿಣ ಕನ್ನಡ ಜಿಲ್ಲೆ ಒಂದರಲ್ಲೇ ಅಂತಹ ಪರೀಕ್ಷೆಗೆ ಕುಳಿತುಕೊಳ್ಳುವ ಸುಮಾರು ೧೫೦ ಹೆಡ್ ಕಾನ್‌ಸ್ಟೇಬಲ್‌ಗಳಿಗೆ ಅನ್ಯಾಯವಾಗುತ್ತಿದೆ. ಇದನ್ನು ಸರಕಾರ ಕೂಡಲೇ ಗಮನಿಸಿ ತೊಂದರೆಗೀಡಾದಂತಹ ಪೊಲೀಸ್‌ಕಾನ್ಸ್‌ಟೇಬಲ್‌ಗಳಿಗೆ ನ್ಯಾಯ ಒದಗಿಸಬೇಕಾಗಿ ಒತ್ತಾಯಿಸುತ್ತಿದ್ದೇನೆ.

ಶ್ರೀ ಬಿ.ರಾಚಯ್ಯ.—ನಾನು ಈ ಕೆಳಕಂಡಂತೆ ಉತ್ತರವನ್ನು ನೀಡಬಯಸುತ್ತೇನೆ. ಕರ್ನಾಟಕ ರಾಜ್ಯ ಪೋಲೀಸ್ ಸೇವಾ ನಿಯಮಾವಳಿ (ನೇಮಕಾತಿ) ೧೯೬೭ರ ಪ್ರಕಾರ, ದಿನಾಂಕ ೨೮.೭೩ ರವರೆಗೆ ಪೊಲೀಸ್ ಕಾನ್‌ಸ್ಟೇಬಲ್ ಆಗಿ ನೇಮಕಾತಿ ಮಾಡಿಕೊಳ್ಳಲು ಕಡೆಯ ಪಕ್ಷ ಏನೇ ತರಗತಿಯ ಉತ್ತೀರ್ಣರಾಗಬೇಕಾಗಿತ್ತು. ನಂತರ ವಿದ್ಯಾಭ್ಯಾಸದ ಅರ್ಹತೆಯನ್ನು ಎಸ್.ಎಸ್.ಎಲ್.ಸಿ ಏರಿಗೆ ಹೆಚ್ಚಿಸಲಾಗಿದೆ.

ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಯಿಂದ ಪೊಲೀಸ್ ಹೆಡ್‌ಕಾನ್ಸ್‌ಟೇಬಲ್ ಹುದ್ದೆಗೆ ಮುಂಬಡ್ತಿ ಹೊಂದಲು ಪರಿಗಣಿಸಬೇಕಾದರೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಆದರಂತೆ ಪ್ರಾಥಮಿಕ ಕಾನೂನು ಮತ್ತು ಪೊಲೀಸ್ ಕರ್ತವ್ಯದ ಜ್ಞಾನದ ಬಗ್ಗೆ ಇಂಗ್ಲೀಷ್‌ನಲ್ಲಿ ಅಥವಾ ಕನ್ನಡದಲ್ಲಿ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಪೊಲೀಸ್ ಕರ್ತವ್ಯದ ಸಾಮಾನ್ಯ ಜ್ಞಾನದ ವಿಷಯದ ಬಗ್ಗೆ ಒಂದು ಪೇಪರನ್ನು ಬರೆಯಬೇಕು. ಅದಲ್ಲದೆ ಡ್ರಿಲ್, ಪರೇಡ್, ಕಮಾಂಡ್ ಮತ್ತು ಸಶಾಸ್ತ್ರಗಳನ್ನು ಉಪಯೋಗಿಸುವ ಜ್ಞಾನದ ಬಗ್ಗೆ ಪೊಲೀಸ್ ಕರ್ತವ್ಯದ ಸಾಮಾನ್ಯ ಜ್ಞಾನ ಮತ್ತು ಸೇವೆಯಲ್ಲಿ ನಿರ್ಧಾರದ ಬಗ್ಗೆ ಮೌಖಿಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು.

ಕರ್ನಾಟಕ ಸೇವಾ ಪರೀಕ್ಷೆ ಕಾಯಿದೆ ೧೯೭೬ರ ಉಪಬಂಧದ ಪ್ರಕಾರ ದಿನಾಂಕ ೧-೧೧-೫೬ ರಿಂದ ೩೧-೫-೭೭ ರವರೆಗೆ ಯಾವ ಪರೀಕ್ಷೆಗಳೂ ಬಡ್ತಿಯ ಬಗ್ಗೆ ನಿಯಮಿತವಾಗಿರುವುದಿಲ್ಲ. ಆದರಂತೆ ಈ ಅವಧಿಯಲ್ಲಿ ಮಾಡಿರುವ ಎಲ್ಲಾ ಮುಂಬಡ್ತಿಗಳನ್ನು ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಪುನರ್ವಿಲೋಕನ ಮಾಡಲಾಗಿದೆ. ಆದುದರಿಂದ ೧೯೭೪ ರ ೩ ವರ್ಷದೊಳಗೆ ಸೇವೆಗೆ ಸೇರಿದವರನ್ನು ಜೇಷ್ಠತೆ ಮತ್ತು ಅರ್ಹತೆಯ ಪ್ರಕಾರ ಬಡ್ತಿ ಮಾಡಿಲ್ಲವೆಂಬುದನ್ನು ಹೇಳಲಾಗದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗೆ ದಿನಾಂಕ ೧-೧೧-೫೬ ರ ನಂತರ ನೇಮಕಗೊಂಡ ಪೊಲೀಸ್ ಕಾನ್‌ಸ್ಟೇಬಲ್ಲುಗಳನ್ನು, ಪೊಲೀಸ್ ಹೆಡ್‌ಕಾನ್‌ಸ್ಟೇಬಲ್‌ಗಳ ಹುದ್ದೆಗೆ ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇರೆಗೆ ೧೨೩ ಪೊಲೀಸ್ ಕಾನ್‌ಸ್ಟೇಬಲ್‌ಗಳಿಗೆ ಮುಂಬಡ್ತಿ ಕೊಡಲಾಯಿತು. ಕರ್ನಾಟಕ ಉಚ್ಚ ನ್ಯಾಯಾಲಯವು ಮತ್ತು ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅಪೀಲ್ ಸಂಖ್ಯೆ ೧೩೬೭-೧೩೬೯-೧೯೭೯ ೧೯೬೨ ಮತ್ತು ೧೯೮೩-೮೪ ರಲ್ಲಿ ಹಾಗೂ ಹಲವಾರು ಅರ್ಜಿಗಳ ಮೇಲೆ ನೀಡಿರುವ ನಿರ್ಣಯಗಳ ಮೇರೆಗೆ ಈ ೧೨೩ ಪೊಲೀಸ್ ಹೆಡ್ ಕಾನ್‌ಸ್ಟೇಬಲ್‌ಗಳನ್ನು ದಿನಾಂಕ ೨೨-೩-೮೭ ರಂದು ನಡೆಯುವ ಮುಂಬಡ್ತಿ ಪರೀಕ್ಷೆಗೆ ಕುಳಿತುಕೊಳ್ಳಲು ಸೂಚನೆ ನೀಡಲಾಗಿದೆ.